JANUARY 09, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ಅಂತಾರಾಷ್ಟ್ರೀಯ ಗುಣಮಟ್ಟದ, ಸೈಕ್ಲಿಂಗ್ ವೆಲೋಡ್ರೋಮ್; ಇಂದು, ವಿಜಯಪುರದಲ್ಲಿ ಮುಖ್ಯಮಂತ್ರಿ, ಲೋಕಾರ್ಪಣೆ.
- ಮೈಸೂರಿನಲ್ಲಿ, ಇಂದಿನಿಂದ 3 ದಿನ, ದೇಸಿ ಎಣ್ಣೆಗಳು ಮತ್ತು ಎಣ್ಣೆ ಬೀಜಗಳ ಪ್ರದರ್ಶಿನಿ.
- ವಿಶಿಷ್ಟ ಗುರುತು ಪ್ರಾಧಿಕಾರದಿಂದ, ‘ಆಧಾರ್’ ಅಧಿಕೃತ ಶುಭ ಚಿನ್ಹೆ, ‘ಉದಯ’ ಅನಾವರಣ.
- ಇಂದು, ‘ಅನಿವಾಸಿ ಅಥವಾ ಪ್ರವಾಸಿ ಭಾರತೀಯ ದಿನಾಚರಣೆ’.

<><><>

ಈಗ ವಾರ್ತೆಗಳ ವಿವರ

<><><>

ವಿಜಯಪುರದಲ್ಲಿ ನೂತನವಾಗಿ ನಿರ್ಮಾಣಗೊಂಡ, ಅಂತಾರಾಷ್ಟ್ರೀಯ ಗುಣಮಟ್ಟದ, ಅತ್ಯಾಧುನಿಕ ಸೈಕ್ಲಿಂಗ್ ವೆಲೋಡ್ರೋಮ್‌ನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮಧ್ಯಾಹ್ನ 12 ಗಂಟೆಗೆ, ದರ್ಬಾರ ಮೈದಾನದಲ್ಲಿ, ಉದ್ಘಾಟಿಸಲಿದ್ದಾರೆ.

<><><>

ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರ ಮಟ್ಟದ, ಸೈಕ್ಲಿಂಗ್ ಚಾಂಪಿಯನ್‌ಶಿಪ್‌ಗಳನ್ನು ಸಂಘಟಿಸಲು ಹಾಗೂ ರಾಜ್ಯದ ಸೈಕ್ಲಿಂಗ್ ಪಟುಗಳ ಪೂರ್ವಾಭ್ಯಾಸಕ್ಕೆ, ಈ ವೆಲೋಡ್ರೋಮ್ ಆಸರೆಯಾಗಲಿದೆ ಎಂದು, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ, ರಾಷ್ಟ್ರೀಯ ಸೈಕ್ಲಿಸ್ಟ್ ಹಾಗೂ ರಾಜ್ಯ ಅಮ್ಯೇಚ್ಯೂರ್ ಸೈಕ್ಲಿಂಗ್ ಅಸೋಸಿಯೇಷನ್ ಅಧ್ಯಕ್ಷ, ವಿಜಯಪುರದ ರಾಜು ಬಿರಾದಾರ.

<><><>

ರಾಷ್ಟ್ರೀಯ ಸೈಕ್ಲಿಸ್ಟ್ ರಾಜು ಬಿರಾದಾರ ಧ್ವನಿ 44 ಸೆಕೆಂದುಗಳು

<><><>

ಮೈಸೂರಿನ ನಂಜರಾಜ ಬಹದ್ದೂರ ಛತ್ರದಲ್ಲಿ, ಇಂದಿನಿಂದ 3 ದಿನಗಳ ವರೆಗೆ, ದೇಸಿರಿ ನ್ಯಾಚುರಲ್ಸ್ ಸಂಸ್ಥೆ, ಎಣ್ಣೆಕಾಳು ಬೆಳೆಯುವ, ರೈತರು ಮತ್ತು ಗಾಣದ ಎಣ್ಣೆ ಉತ್ಪಾದಕರೊಂದಿಗೆ, ನೇರ ಸಂವಾದ, ಕಲಬೆರಕೆ ಎಣ್ಣೆಗಳನ್ನು ಗುರುತಿಸುವ ಬಗೆ ಹಾಗೂ, 30ಕ್ಕೂ ಹೆಚ್ಚು ಶುದ್ಧ ರಾಸಾಯನಿಕ ಮುಕ್ತ ದೇಸಿ ಎಣ್ಣೆಗಳು, ಮತ್ತು ಎಣ್ಣೆ ಬೀಜಗಳ ಪ್ರದರ್ಶನ, ಆಯೋಜಿಸಿದೆ.ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ದೇಸಿರಿ ನ್ಯಾಚುರಲ್ಸ್ ವಿಶ್ವಸ್ಥ ನವೀನಕುಮಾರ.

<><><>

ನವೀನಕುಮಾರ ಧ್ವನಿ – 41 ಸೆಕೆಂದುಗಳು

<><><>

ದೇಶಾದ್ಯಂತ ಒಟ್ಟು, 12 ಕೋಟಿ 15 ಲಕ್ಷ ಕುಟುಂಬಗಳು, ಉದ್ಯೋಗ ಖಾತ್ರಿ ಯೋಜನೆ ಅಡಿ, ಕೂಲಿ ಅರಸಿ ಬದುಕುತ್ತಿದ್ದಾರೆ; ಆ ಪೈಕಿ ಶೇಕಡ 57 ರಷ್ಟು ಮಹಿಳೆಯರು, ಶೇಕಡ 37 ರಷ್ಟು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ, ಕೂಲಿ ಕಾರ್ಮಿಕರಿದ್ದಾರೆ ಎಂದು, ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ಜಿ ರಾಮ್ ಜಿ ಯೋಜನೆ ಅಡಿ, ಪಾರದರ್ಶಕತೆ ಹಾಗೂ, ಒಟ್ಟು ಅನುದಾನವನ್ನು, 88 ಸಾವಿರ ಕೋಟಿ ರೂಪಾಯಿಗೆ ಹೆಚ್ಚಿಸಿ, ದಿನಗೂಲಿಯೊಂದಿಗೆ, 125 ಮಾನವ ದಿನಗಳಿಗೆ ಏರಿಸಲಾಗಿದೆ ಎಂದರು.

<><><>

ಕೊರಗ ಸಮುದಾಯದಲ್ಲಿ ಅನಾರೋಗ್ಯ ಮತ್ತು ಜನಸಂಖ್ಯೆ ಇಳಿಕೆ ಬಗ್ಗೆ, ಸಮಗ್ರ ಅಧ್ಯಯನದ ಅವಶ್ಯಕತೆ ಇದೆ ಎಂದು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ, ಜಿ.ಪಲ್ಲವಿ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ, ಬೆಳ್ತಂಗಡಿ ತಾಲೂಕಿನ, ಒಂಬತ್ತು ಗ್ರಾಮಗಳಲ್ಲಿ ವಾಸಿಸುವ, ಮಲೆಕುಡಿಯ ಸಮುದಾಯದ ಕುಟುಂಬಗಳಿಗೆ, ಯಾವುದೇ ಮೂಲ ಸೌಕರ್ಯ ಲಭ್ಯವಿಲ್ಲ. ಮುಖ್ಯಮಂತ್ರಿಯವರ ಗಮನಕ್ಕೆ ಈ ಎರಡೂ ವಿಷಯಗಳನ್ನು ತಂದು, ನಿಗಮದ ವತಿಯಿಂದ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

<><><>

ವಿಶಿಷ್ಟ ಗುರುತು ಪ್ರಾಧಿಕಾರ – ಆಧಾರ್ ಪ್ರಯಾಣದಲ್ಲಿ, ಮೈಲಿಗಲ್ಲು ಎಂದು ಗುರುತಿಸುವ, ಅಧಿಕೃತ ಮ್ಯಾಸ್ಕಾಟ್, 'ಉದಯ', Unique Identification Authirity of India, ಅನಾವರಣಗೊಳಿಸಿದೆ. ಉದಯ ಆಧಾರ್ ಸಂಬಂಧಿತ ಮಾಹಿತಿ, ಜನಸ್ನೇಹಿಯಾಗಿ ಒದಗಿಸಲಿದೆ. ಆಧಾರ್ ಸೇವೆಗಳ ಕುರಿತು, ಸಾರ್ವಜನಿಕರಲ್ಲಿ ತಿಳಿವಳಿಕೆ, ಸುಗಮ ನವೀಕರಣ, ದೃಢೀಕರಣ, ಆಫ್‌ಲೈನ್ ಪರಿಶೀಲನೆ, ಮಾಹಿತಿಯ ಆಯ್ದ ಹಂಚಿಕೆ, ಹೊಸ ತಂತ್ರಜ್ಞಾನ ಅಳವಡಿಕೆ ಹಾಗೂ ಜವಾಬ್ದಾರಿಯುತ ಬಳಕೆಯನ್ನು, ಖಾತ್ರಿ ಪಡಿಸಲಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಭಾರತದ ಪ್ರಗತಿಗೆ, ಸಾಗರೋತ್ತರ ಭಾರತೀಯ ಸಮುದಾಯದ, ಕೊಡುಗೆಗಳನ್ನು ಸ್ಮರಿಸಲು, ಇಂದು, 'ಪ್ರವಾಸಿ ಭಾರತೀಯ ದಿನ' ಅಥವಾ 'ಅನಿವಾಸಿ ಭಾರತೀಯ ದಿನ' ಆಚರಿಸಲಾಗುತ್ತದೆ. ಪ್ರಪಂಚದಾದ್ಯಂತ, ಸ್ಥಳೀಯ ರಾಯಬಾರಿ ಕಚೇರಿಗಳು ಮತ್ತು ಮಿಷನ್‌ಗಳು, ರಾಷ್ಟ್ರ ನಿರ್ಮಾಣದಲ್ಲಿ, ವಲಸೆ ಬಂದವರ ಪಾತ್ರವನ್ನು ಪ್ರತಿಬಿಂಬಿಸುವ, ಕಾರ್ಯಕ್ರಮಗಳನ್ನು ಇಂದು ಆಯೋಜಿಸಿವೆ.

<><><>

ಬ್ರಿಟಿಷರ ವಿರುದ್ಧದ, ಭಾರತ ಸ್ವಾತಂತ್ರ್ಯ ಚಳವಳಿಯ ಮೇಲೆ, ಪ್ರಭಾವ ಬೀರಿದ, ದಕ್ಷಿಣ ಆಫ್ರಿಕಾದಲ್ಲಿ, 21 ವರ್ಷಗಳ ಕಾಲ ಕಳೆದ ನಂತರ, ಮಹಾತ್ಮ ಗಾಂಧೀಜಿ, 1915ರ, ಜನವರಿ 9 ರಂದು ಭಾರತಕ್ಕೆ ಮರಳಿದ ದಿನವನ್ನು, ಪ್ರವಾಸಿ ಭಾರತೀಯ ದಿವಸ್ ಆಗಿ, ಆಚರಿಸಲಾಗುತ್ತದೆ.

<><><>

ಭಾರತ ಸರ್ಕಾರ, 2003 ರಲ್ಲಿ ಪ್ರಾರಂಭಿಸಿದ, ಅನಿವಾಸಿ ಭಾರತೀಯ ದಿವಸ್, 35 ಮಿಲಿಯನ್‌ಗಿಂತಲೂ ಹೆಚ್ಚು ಎನ್.ಆರ್.ಐ.ಗಳು ಮತ್ತು ಭಾರತೀಯ ಮೂಲದ ವ್ಯಕ್ತಿಗಳು, ಪಿ.ಐ.ಒ.ಗಳ ಮತ್ತು ಮಾತೃಭೂಮಿಯ ನಡುವಿನ ಸಂಪರ್ಕವನ್ನು ಬಲ ಪಡಿಸುತ್ತಿದೆ.

<><><>

ಆಕಾಶವಾಣಿಯ ಧಾರವಾಡ ಕೇಂದ್ರ, 'ಬಹುಜನ ಹಿತಾಯ, ಬಹುಜನ ಸುಖಾಯ' ಧ್ಯೇಯದೊಂದಿಗೆ ಕಾರ್ಯಾರಂಭಿಸಿ, 76 ವರ್ಷಗಳ, ಸಾರ್ಥಕ ಸಾರ್ವಜನಿಕ ಪ್ರಸಾರ ಸೇವೆಯನ್ನು, ನಿನ್ನೆಗೆ ಪೂರ್ಣಗೊಳಿಸಿತು.

ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಭಾಗದ, 76 ವರ್ಷಗಳ ಹಲವು ಬೆಳವಣಿಗೆಗಳಿಗೆ ಸಾಕ್ಷಿಯಾದ, ಧಾರವಾಡ ಆಕಾಶವಾಣಿಯ ಕುರಿತು, ಸಹಾಯಕ ನಿಲಯ ನಿರ್ದೇಶಕ, ಶರಣಬಸವ ಚೋಳಿನ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶರಣಬಸವ ಚೋಳಿನ ಧ್ವನಿ 45 ಸೆಕೆಂದುಗಳು

<><><>

ನಿಧನ ವಾರ್ತೆ

<><><>

ಅಲ್ಪಕಾಲಿಕ ಅಸೌಖ್ಯದಿಂದ ಬಳಲಿ, ಮಹಾರಾಷ್ಟ್ರದ ಪುಣೆಯಲ್ಲಿ ನಿಧನರಾದ, ಖ್ಯಾತ ಪರಿಸರ ವಿಜ್ಞಾನಿ, ಪ್ರೊಫೆಸರ್ ಮಾಧವ ಧನಂಜಯ ಗಾಡ್ಗೀಳ್, ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಸಕಲ ಸರ್ಕಾರಿ ಗೌರವಗಳೊಂದಿಗೆ, ನಿನ್ನೆ ಸಂಜೆ, ಮುಕ್ತಿಧಾಮ ವೈಕುಂಠದಲ್ಲಿ, ಜರುಗಿತು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಪದ್ಮವಿಭೂಷಣ ಹಾಗೂ ಚಾಂಪಿಯನ್ಸ್ ಆಫ್ ದಿ ಅರ್ಥ್, ಪ್ರೊಫೆಸರ್ ಗಾಡ್ಗೀಳ್, ಪಶ್ಚಿಮಘಟ್ಟಗಳ ಪರಿಸರ ಅಧ್ಯಯನ ತಜ್ಞರ, ಸಮಿತಿಯ ಅಧ್ಯಕ್ಷರಾಗಿ, ಘಟ್ಟ ಪ್ರದೇಶದ ಉದ್ದಗಲಕ್ಕೂ ಸಂಚರಿಸಿ, ಪ್ರಾಥಮಿಕ ಮಾಹಿತಿಯನ್ನು ಮೂಲದಿಂದಲೇ ಸಂಗ್ರಹಿಸಿ, ಗಮನ ಸೆಳೆದವರು. A Walk Up the Hill: Living with People and Nature, ಕನ್ನಡದಲ್ಲಿ 'ಏರು ಘಟ್ಟದ ನಡಿಗೆ' ಅವರ ಆತ್ಮಕಥೆ. ಬೆಂಗಳೂರಿನ, ಭಾರತೀಯ ವಿಜ್ಞಾನ

ಸಂಸ್ಥೆಯ, ಸಂಶೋಧನಾ ವೇದಿಕೆ, ಸೆಂಟರ್ ಫಾರ್ ಇಕಲಾಜಿಕಲ್ ಸೈನ್ಸಸ್‌ನ ಸ್ಥಾಪಕ, ಪ್ರೊಫೆಸರ್ ಮಾಧವ ಗಾಡ್ಗೀಳ ನಿಧನಕ್ಕೆ, ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲೂಕು, ಮರಕುಂಬಿಯ, ಇನಾಮದಾರ ಸಕ್ಕರೆ ಕಾರ್ಖಾನೆಯಲ್ಲಿ, ಬಾಯ್ಲರ್ ಸ್ಫೋಟಗೊಂಡ ಪರಿಣಾಮ, ಎರಡು ದಿನಗಳ ಅಂತರದಲ್ಲಿ, ಒಟ್ಟು 8 ಜನ ಕಾರ್ಮಿಕರು ಮೃತಪಟ್ಟಿದ್ದಾಗಿ, ಬೆಳಗಾವಿ ಜಿಲ್ಲಾ ಪೊಲೀಸ್ ವರಿ ಷ್ಠಾಧಿಕಾರಿ, ರಾಮರಾಜನ್ ತಿಳಿಸಿದ್ದಾರೆ. ಮುರಗೋಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತರ ಕುಟುಂಬಸ್ಥರು, 1 ಕೋಟಿ ರೂಪಾಯಿ ಪರಿಹಾರ ನೀಡುವಂತೆ, ಒತ್ತಾಯಿಸಿದ್ದಾರೆ.

<><><>

ರಾಷ್ಟ್ರೀಯ ನವೋದ್ಯಮ ದಿನ, ಇದೇ 16 ರಂದು, 'ಸಿಲಿಕಾನ್ ಬೀಚ್ ಸ್ಟಾರ್ಟ್ ಅಪ್, ಟೈಕಾನ್ ಮಂಗಳೂರು, ಸಮಾವೇಶ' ಮಂಗಳೂರಿನ, ಟಿ.ಎಂ.ಎ. ಪೈ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿತವಾಗಿದೆ. ಟೈಕಾನ್ ಮಂಗಳೂರು ಘಟಕದ ಅಧ್ಯಕ್ಷ, ರೋಹಿತ್ ಭಟ್ ಮಾಹಿತಿ ನೀಡಿ, 'ದಿ ಇಂಡಸ್ ಆಂತ್ರ್ಯಪ್ರಿನ್ಯುರ್ಸ್' ಸಹಯೋಗದಲ್ಲಿ, ಕರ್ನಾಟಕ ಡಿಜಿಟಲ್ ಇಕಾನಮಿ ಮಿ ’ನ್ ಪ್ರದರ್ಶಿನಿ ಆಯೋಜಿಸಿದ್ದು, 30ಕ್ಕೂ ಅಧಿಕ ಸ್ಟಾರ್ಟ್ ಅಪ್‌ಗಳು, ತಮ್ಮ ಉದ್ಯಗಳನ್ನು ಪ್ರದರ್ಶಿಸಲಿವೆ. ದೇಶ, ವಿದೇಶಗಳಿಂದ 500 ಕಾರ್ಪೋರೇಟ್ ಲೀಡರ್ಸ್ ಪಾಲ್ಗೊಂಡು, ಅವಲೋಕಿಸಲಿದ್ದಾರೆ, ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ಅಂತಾರಾಷ್ಟ್ರೀಯ ಗುಣಮಟ್ಟದ, ಸೈಕ್ಲಿಂಗ್ ವೆಲೋಡ್ರೋಮ್; ಇಂದು, ವಿಜಯಪುರದಲ್ಲಿ ಮುಖ್ಯಮಂತ್ರಿ, ಲೋಕಾರ್ಪಣೆ.
- ಮೈಸೂರಿನಲ್ಲಿ, ಇಂದಿನಿಂದ 3 ದಿನ, ದೇಸಿ ಎಣ್ಣೆಗಳು ಮತ್ತು ಎಣ್ಣೆ ಬೀಜಗಳ ಪ್ರದರ್ಶಿನಿ.
- ವಿಶಿಷ್ಟ ಗುರುತು ಪ್ರಾಧಿಕಾರದಿಂದ, 'ಆಧಾರ್' ಅಧಿಕೃತ ಶುಭ ಚಿನ್ಹೆ, 'ಉದಯ' ಅನಾವರಣ.
- ಇಂದು, 'ಅನಿವಾಸಿ ಅಥವಾ ಪ್ರವಾಸಿ ಭಾರತೀಯ ದಿನಾಚರಣೆ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>